ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2255
ಸದಸ್ಯರ ಹೆಸರು : ಶ್ರೀ ಕೆ ಹರೀಶ್ ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು
ಉತ್ತರಿಸಬೇಕಾದ ದಿನಾಂಕ : 26-03-2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ಅಂಗನವಾಡಿಗಳ ಸಂಖ್ಯೆ ಎಷ್ಟು;	ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿ ಒಟ್ಟು 324 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.
ಆ)	ಗರಿಷ್ಠ ಹಾಗೂ ಕನಿಷ್ಠ ಮಕ್ಕಳಿರುವ ಅಂಗನವಾಡಿಗಳ ಸಂಖ್ಯೆ ಎಷ್ಟು; (ಪ್ರಸ್ತುತ ನೀಡುತ್ತಿರುವ ಪೌಷ್ಠಿಕ ಆಹಾರದ ಕುರಿತಂತೆ ಮಾಹಿತಿ ಒದಗಿಸುವುದು)	1. ಗರಿಷ್ಠ ಮಕ್ಕಳಿರುವ ಅಂಗನವಾಡಿ ಸಂಖ್ಯೆ: 1 (ಸುಣ್ಣದಕೆರೆ ಅಂಗನವಾಡಿ ಕೇಂದ್ರ). 2. ಕನಿಷ್ಠ ಮಕ್ಕಳಿರುವ ಅಂಗನವಾಡಿ ಸಂಖ್ಯೆ: 1 (ಮಾಳಿಗೆ ಮನೆ ಅಂಗನವಾಡಿ ಕೇಂದ್ರ). (ಪ್ರಸ್ತುತ ನೀಡುತ್ತಿರುವ ಪೌಷ್ಠಿಕ ಆಹಾರದ ಕುರಿತಂತೆ ಮಾಹಿತಿಯನ್ನು ಅನುಬಂಧ-1 ಮತ್ತು 2 ರಲ್ಲಿ ಒದಗಿಸಲಾಗಿದೆ)
ಇ)	ಪ್ರತಿ ಮಗುವಿಗೆ ಪೌಷ್ಠಿಕ ಆಹಾರಕ್ಕೆ ಸಂಬಂಧಿಸಿದಂತೆ ನೀಡಲಾಗುತ್ತಿರುವ ಅನುದಾನ ಎಷ್ಟು? (ಮಾಹಿತಿ ನೀಡುವುದು)	06 ತಿಂಗಳಿನಿಂದ 06 ವರ್ಷದ ಸಾಮಾನ್ಯ ಮಗುವಿಗೆ ಪ್ರತಿ ದಿನಕ್ಕೆ ರೂ.8/- ಮೌಲ್ಯದ ಮತ್ತು 06 ತಿಂಗಳಿನಿಂದ 06 ವರ್ಷದ ತೀವ್ರ ಅಪೌಷ್ಠಿಕ ಮಗುವಿಗೆ ದಿನಕ್ಕೆ ರೂ.12/- ಮೌಲ್ಯದ ಘಟಕ ವೆಚ್ಚದಡಿ ಪೂರಕ ಪೌಷ್ಠಿಕ ಆಹಾರವನ್ನು ನೀಡಲಾಗುತ್ತಿದೆ. 2020-21ನೇ ಸಾಲಿನಲ್ಲಿ ರೂ.195276.20 ಲಕ್ಷಗಳ ಅನುದಾನವನ್ನು ಪೌಷ್ಠಿಕ ಆಹಾರ ಕಾರ್ಯಕ್ರಮಕ್ಕಾಗಿ ಬಿಡುಗಡೆ ಮಾಡಲಾಗಿದೆ.
ಈ)	ಬಾಡಿಗೆ ಕಟ್ಟಡವಿರುವ ಕಡೆಗಳಲ್ಲಿ ಸ್ವಂತ ಕಟ್ಟಡ ನಿರ್ಮಿಸುವ ಯೋಜನೆ ಸರ್ಕಾರದ ಮುಂದಿದೆಯೇ; ಈ ಬಗ್ಗೆ ಹಾಗೂ ತಾಲ್ಲೂಕುವಾರು ವಾರ್ಷಿಕವಾಗಿ ಬೇಕಾಗುವ ಅನುದಾನ ಎಷ್ಟು?	ಹೌದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2104 ಅಂಗನವಾಡಿ ಕೇಂದ್ರಗಳಿದ್ದು, 1884 ಕೇಂದ್ರಗಳಿಗೆ ಸ್ವಂತ ಕಟ್ಟಡವಿರುತ್ತದೆ. 27 ಅಂಗನವಾಡಿ ಕಟ್ಟಡಗಳು ನಿರ್ಮಾಣ ಹಂತದಲ್ಲಿರುತ್ತವೆ. ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಅಂಗನವಾಡಿ ಕೇಂದ್ರಗಳಿಗೆ ನಿವೇಶನ ಹಾಗೂ ಅನುದಾನ ಲಭ್ಯತೆಯ ಆಧಾರದ ಮೇರೆಗೆ ಹಂತ-ಹಂತವಾಗಿ ಸ್ವಂತ ಕಟ್ಟಡ ನಿರ್ಮಿಸಲಾಗುವುದು. ತಾಲ್ಲೂಕುವಾರು ವಾರ್ಷಿಕವಾಗಿ ಬೇಕಾಗುವ ಅನುದಾನದ ವಿವರಗಳನ್ನು ಅನುಬಂಧ-3ರಲ್ಲಿ ಒದಗಿಸಲಾಗಿದೆ.

ಸಂಖ್ಯೆ: ಮಮಇ 126 ಐಸಿಡಿ 2021

(ಆಚಾರ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು